ಪ್ರಧಾನ ನ್ಯಾಯಾದೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕುಂದಾಪುರ

ಸಿಸಿ ನಂಬ್ರಃ 164/2024
ಸಿಡಬ್ಲ್ಯೂ- 9
ಪಿಡಬ್ಲ್ಯೂ- 9

| | | |
|---|---|---|
| ಸಾಕ್ಷಿದಾರರ ಹೆಸರು | : | ಆನಂದ ಗಾಣಿಗ |
| ತಂದೆಯ ಹೆಸರು | : | ಶಂಕರ |
| ಪ್ರಾಯ | : | 52 ವರ್ಷ |
| ಉದ್ಯೋಗ | : | ಕೂಲಿ |
| ವಾಸ | : | ನೇರಳಕಟ್ಟೆ |

ದಿನಾಂಕಃ **28-07-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೊಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ

ಸಾಕ್ಷಿಗೆ ದಾಖಲೆಯನ್ನು ತೋರಿಸಿದ್ದು, ಸಾಕ್ಷಿ ದಾಖಲೆ ನೋಡಿ ತನ್ನ ಸಹಿಯನ್ನು ಗುರುತಿಸಿದ್ದು, ಸದರಿ ದಾಖಲೆ ಸ್ವತ್ತು ಸ್ವಾಧೀನ ಪಂಚಾನಾಮೆ ಆಗಿದ್ದು, ಪಂಚನಾಮೆಯನ್ನು ಈಗಾಗಲೇ ನಿ.ಪಿ.8 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.8(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಪ್ರಕಾಶ್ ಗಾಣಿಗರವರ ಮನೆಯಾದ ನೀಲ್ ಕೋಡು ನೀಲ್ ಪಳ್ಳಿಯಲ್ಲಿ ಮಾಡಿರುತ್ತೇನೆ. ಯಾವುದೋ ಒಂದು ಬ್ಯಾಟರಿ ಕಳ್ಳತನ ಆಗಿತಂತೆ, ನಾನು ಆ ಬ್ಯಾಟರಿಯನ್ನು ಪ್ರಕಾಶ್ ರವರ ಮನೆಯಲ್ಲಿ ನೋಡಿರುತ್ತೇನೆ. ಪೊಲೀಸರು ಈ ವಿಚಾರವಾಗಿ ಸಹಿ ಮಾಡಲು ಹೇಳಿದ್ದು ನಾನು ಸಹಿ ಮಾಡಿರುತ್ತೇನೆ. ಆ ಬ್ಯಾಟರಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಬ್ಯಾಟರಿ ತೋರಿಸಲಾಗಿದ್ದು, ಸಾಕ್ಷಿ ನ್ಯಾಯಲಯದ ಮುಂದೆ ಇರುವ ಬ್ಯಾಟರಿಯನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಈಗಾಗಲೇ ಮು.ಮಾಲು 1 ಎಂದು ಗುರುತಿಸಲಾಗಿರುತ್ತದೆ.

ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಯು.ಆರ್ ಎಸ್. ವಕೀಲರಿಂದಃ

1.ನಮ್ಮ ಮನೆ ಹಾಗೂ ಪ್ರಕಾಶ್ ಗಾಣಿಗರವರ ಮನೆ ಅಕ್ಕ ಪಕ್ಕ ಇರುತ್ತದೆ. ಪ್ರಕಾಶ್ ಗಾಣಿಗ ನಮ್ಮ ಜಾತಿಯವರು ಎಂದರೆ ಸರಿ. ನಾನು ಕೆಲಸ ಮುಗಿಸಿ ಮನೆಗೆ ಬರುತ್ತಿದ್ದೆ, ಪೋಲಿಸರ ವಾಹನ ನಿಂತಿದ್ದು, ಅಲ್ಲಿ ಹೋಗಿ ನೋಡಿದ್ದು ಪೊಲೀಸರು ಸಹಿ ಹಾಕು ಎಂದು ಹೇಳಿದ್ದಕ್ಕೆ ಸಹಿ ಮಾಡಿರುತ್ತೆನೆ. ನಾನು ಸ್ಥಳಕ್ಕೆ ಹೋಗುವ ಪೂರ್ವದಲ್ಲಿ ಪೊಲೀಸರು 3 - 4 ಜನ ಇದ್ದರು. ಪ್ರಕಾಶ್ ಗಾಣಿಗ ಅಲ್ಲಿಯೇ ಇದ್ದರು. ನಾನು ಸ್ಥಳದಲ್ಲಿ ಅರ್ಧ ಮುಕ್ಕಾಲು ಗಂಟೆ ಇದ್ದೆ. ಆ ದಾಖಲೆಯನ್ನು

ಯಾರು ಬರೆದಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಆ ದಾಖಲೆಯಲ್ಲಿ ಏನು ಬರೆದಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಪೊಲೀಸರು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ. ಮು.ಮಾಲು 1 ಎಲ್ಲಾ ಬ್ಯಾಟರಿ ಶಾಪ್ ನಲ್ಲಿ ಸಿಗುತ್ತದೆ ಎಂದರೆ ಸರಿ. ಆ ದಿನ ಕಳೆದು ಹೋದ ಬ್ಯಾಟರಿ ಇದೆ ಎಂದು ಹೇಳಲು ಯಾವುದೇ ವಿಶೇಷ ಗುರುತು ಇಲ್ಲ ಎಂದರೆ ಸರಿ, ಸಾಕ್ಷಿ ಅದು ಕೆಂಪು ಬ್ಯಾಟರಿ ಎಂದು ನುಡಿಯುತ್ತಾರೆ. ಅದು ಯಾವ ಕಂಪೆನಿಯದ್ದು ಎಂದು ಗೊತ್ತಿರುವುದಿಲ್ಲ. ಮು.ಮಾಲು 1 ಕ್ಕೂ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿದ್ದನ್ನು ನಾನು ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಹಾಗೂ ಪ್ರಕಾಶ್ ಗಾಣಿಗ ಒಂದೇ ಜಾತಿಯವರು ಆಗಿದ್ದರಿಂದ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದರೂ ಸಹ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ಓದಿ ಹೇ. ಕೇ. ಸರಿ ಇದೆ. — ನನ್ನ ಹೇ. ಮೇ. ಬೆ. ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ